ಶ್ರೀ ಡಿ.ಬಿ. ಚಂದ್ರೆಗೌಡ.—ನಮಗೆನೂ ಕುತೂಹಲ ಇಲ್ಲ. ನಿಮಗೆ ಕೆಟ್ಟ ಹೆಸರು ಬರುತ್ತಾ ಇದೆ ಎನ್ನುವುದೇ ನಮಗೆ ಸಂಕಟ. ನಿಮ್ಮ ಪಕ್ಷದವರು ಸೇರಿದ್ದಾರೆಂದು ಕೆಟ್ಟ ಹೆಸರು ಬರಂತ್ತಿದೆ. ಅದಾಗ ಬಾರದು ಎನ್ನುವುದು ನಮ್ಮ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಂದಕ್ಕೂ ಅರ್ಥ ಕಲ್ಪಿಸ ಬಾರದು. ನಾವು ಯಾವ ಅರ್ಥ ಇಟ್ಟುಕೊಂಡಿಲ್ಲ. ಇದು ಪ್ರಾಮಾಣಿಕವಾದಂಥ ಪ್ರಯತ್ನ ರಾಜ್ಯದಲ್ಲಿ ಅನ್ಯಾಯ ನಡೆದಿದೆ. ಇದು ಬಹಳ ಗುರುತರವಾಗಿದೆ. ಇದು ಬರೀ ರಾಜ್ಯಕ್ಕೆ ಸಂಬಂಧಪಟ್ಟಿದ್ದಲ್ಲ, ಇಡೀ ದೇಶಕ್ಕೆ ಗೊತ್ತಾಗಿದೆ ಮತ್ತು ನಮ್ಮ ಪೋಲೀಸರು ಏಟು ತಿಂದು ಬಂದಿದ್ದಾರೆ. ಕತೆಗಳು ನಡೆದಿದೆ. ಇದು ಕತೆ, ಕಲ್ಪನೆ ಏನಲ್ಲ.

ಅಧ್ಯಕ್ಷರು.—ನಾಳೆ ಚರ್ಚೆ ಮಾಡೋಣ ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ತಾವು ಕೂಡ ಆದರ ಮೇಲೆ ಕ್ಲಾರಿಫಿಕೇಷನ್ಸ್ ಕೇಳಬಹುದು.

ಗಮನ ಸೆಳೆಯುವ ಸೂಚನೆಗಳು

೧. ದ. ಕ. ಜಿಲ್ಲೆಯ ಸುಳ್ಯ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಮಂಜೂರು ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸುಳ್ಯ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಮಂಜೂರಾಗಿ ಐದು ವರ್ಷಗಳು ಕಳೆದರೂ, ಇದುವರೆವಿಗೂ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರದೇ ಇರುವುದರಿಂದಾಗಿ ಸಾರ್ವಜನಿಕರಿಗೆ ತೊಂದರೆ ಆಗಿರುವ ಬಗ್ಗೆ ಮಾನ್ಯ ಬಂದರು, ಮಿನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಎನ್. ನರಸಿಂಹ ಮೂರ್ತಿ (ಮಾನ್ಯ ಬಂದರು, ಮಿನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರಾದ ಶ್ರೀ ಕೆ. ಕುಶಾಲ ಅವರು ಸುಳ್ಯ ಪಟ್ಟಣದ ನೀರು ಸರಬರಾಜಿನ ಬಗ್ಗೆ ಗಮನ ಸೆಳೆದಿರುವ ಸೂಚನೆಗೆ ಸರ್ಕಾರದ ವತಿಯಿಂದ ಈ ರೀತಿ ಉತ್ತರ ಇದೆ.

ಸುಳ್ಯ ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಕೇಂದ್ರವಾಗಿದ್ದು ೧೯೮೧ರ ಜನಗಣತಿಯು ಪ್ರಕಾರ ೧೯,೩೮೯ ಜನಸಂಖ್ಯೆ ಇದ್ದು, ಈಗಿನ ಜನಸಂಖ್ಯೆಯು ಸುಮಾರು ೧೪,೦೦೦ ವಾಗಿರುತ್ತದೆ.

ಸುಳ್ಯ ಪಟ್ಟಣಕ್ಕೆ ಪಯಸ್ವನಿ ನದಿಯಿಂದ ಒಂದು ಯೋಜನೆಯನ್ನು ಕೈಗೊಂಡು ೧೯೭೩ ರಲ್ಲಿ ಪೂರೈಸಿ ನೀರು ಸರಬರಾಜು ಮಾಡಲಾಗುತ್ತಿತ್ತು. ಈ ಯೋಜನೆಯನ್ನು ೧೪ ೦೦೦ ಜನಸಂಖ್ಯೆಗೆ ದಿನಂಪ್ರತಿ ತಲಾ ೪೫ ಲೀಟರ್‌ನಂತೆ ನೀರು ಸರಬರಾಜು ಮಾಡಲು ಯೋಜಿಸಲಾಗಿತ್ತು.

ಸುಳ್ಯ ಪಟ್ಟಣದ ಅಭಿವೃದ್ಧಿಯನ್ನು ಮತ್ತು ಅದರ ಜನಸಂಖ್ಯೆ ಹೆಚ್ಚುವರಿಯನ್ನು ಗಮನದಲ್ಲಿಟುಕೊಂಡು ಈ ಪಟ್ಟಣಕ್ಕೆ ಒಂದು ಅಭಿವೃದ್ಧಿ ಯೋಜನೆಯನ್ನು ಸರ್ಕಾರಿ ಆಜ್ಞೆ ಸಂಖ್ಯೆ : ವನಇ ೧೬ ಯು ಡಬ್ಲ್ಯು ಎಸ್ ೮೫ ದಿನಾಂಕ ೧೮-೬-೮೫ ರಲ್ಲಿ ರೂ. ೨೬.೦೦ ಲಕ್ಷಗಳ ಅಂದಾಜನ್ನು ಆಡಳಿತಾತ್ಮಕ ಮಂಜೂರು ಮಾಡಲಾಯಿತು ಈ ಯೋಜನೆಯನ್ನು ೨೦೧೧ನೇ ಇಸವಿಯಲ್ಲಿ ೨೦,೦೦೦ ಜನ ಸಂಖ್ಯೆಗೆ ದಿನಂಪ್ರತಿ ತಲಾ ೧೦೦ ಲೀಟರ್‌ನಂತೆ ನೀರು ಸರಬರಾಜು ಮಾಡಲು ಯೋಜಿಸಲಾಗಿದೆ.

ಈ ಯೋಜನೆಗೂ ಪಯಸ್ವನಿ ನದಿಯನ್ನು ಮೂಲವಾಗಿಟ್ಟುಕೊಂಡು ಯೋಜಿಸಲಾಗಿದೆ.

ಈ ಯೋಜನೆಯಲ್ಲಿ ಶುದ್ಧೀಕರಣಾಗಾರದ ಕಾಮಗಾರಿ ಹಾಗೂ ೬೦ ಅಶ್ವಶಕ್ತಿಯ ವಿದ್ಯುತ್ ಸ್ಟ್ಯಾಂಡ್ ಬೈ ಪಂಪನ್ನು ಅಳವಡಿಸುವ ಕಾಮಗಾರಿ ಬಿಟ್ಟು ಉಳಿದೆಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಮತ್ತು ಈ ಯೋಜನೆಯಂತೆ ಈ ಪಟ್ಟಣಕ್ಕೆ ದಿನಂಪ್ರತಿ ತಲಾ ೫೮ ಲೀಟರ್‌ನಂತೆ ಫೆಬ್ರವರಿ ೯೦ ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಈ ಹಿಂದೆ ಶುದ್ಧೀಕರಣಾಗಾರದ ಕಾಮಗಾರಿಗೆ ೨ ಭಾರಿ ಟೆಂಡರು ಕರೆಯಲಾಗಿದ್ದು, ನಮೂದಿಸಿರುವ ದರಗಳು ಅಧಿಕವಾಗಿದ್ದುದರಿಂದ ಟೆಂಡರುಗಳನ್ನು ತಿರಸ್ಕೃತಗೊಳಿಸಲಾಯಿತು. ಈ ಕಾಮಗಾರಿಗೆ ಮತ್ತೊಮ್ಮೆ ಟೆಂಡರ್ ಕರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಹಾಗೂ ೬೦ ಅಶ್ವಶಕ್ತಿಯ ಸ್ಟ್ಯಾಂಡ್ ಬೈ ಪಂಪನ್ನು ಖರೀದಿಸಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಮುಖ್ಯ ಒಂದು ಪರಿಷ್ಕೃತ ಅಂದಾಜನ್ನು ರೂ. ೪೮.೫ ಲಕ್ಷಗಳಿಗೆ ಈ ಕೆಳಕಂಡ ಹೆಚ್ಚುವರಿ ಕಾಮಗಾರಿಗಳನ್ನು ಆಳವಡಿಸಿ ತಯಾರಿಸಿ ಮಂಜೂರಾತಿಗಾಗಿ ಪರಿಶೀಲನೆಯಲ್ಲಿದೆ.

೧) ಹೆಚ್ಚುವರಿ ಜಲಸಂಗ್ರಹಾಗಾರಗಳನ್ನು ನಿರ್ಮಿಸುವುದು.

೨) ಹೆಚ್ಚುವರಿ ವಿತರಣಾ ಕೊಳವೆಗಳನ್ನು ಹಾಕುವುದು.

೩) ಶುದ್ಧ ನೀರಿನ ಪಂಪನ್ನು ಶುದ್ಧೀಕರಣಾಗಾರದ ಆವರಣದಲ್ಲಿ ಆಳವಡಿಸುವುದು.

೪) ಸಿಬ್ಬಂದಿ ವಸತಿ ಗೃಹಗಳನ್ನು ನಿರ್ಮಿಸುವುದು.

ಇದುವರೆವಿಗೆ ಈ ಯೋಜನೆಗೆ ರೂ. ೧೮.೨೦ ಲಕ್ಷಗಳು ಖರ್ಚಾಗಿದೆ. ಈ ಯೋಜನೆಯಂ ಕೊಳವೆ ನೀರು ಸರಬರಾಜು ಯೋಜನೆಯಡಿಯಲ್ಲಿ ಮಂಜೂರು ಮಾಡಲಾಗಿದ್ದು, ಸ್ಥಳೀಯ ಪಂಚಾಯತ್ ವತಿಯಿಂದ ಶೇಕಡಾ ೧೦ರ ಠೇವಣಿಯಲ್ಲಿ ರೂ. ೧.೧೨ ಲಕ್ಷವನ್ನು ಜಮಾ ಮಾಡಿರುತ್ತಾರೆ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಈ ಕಾಮಗಾರಿ ೧೯೮೫ರಲ್ಲಿ ಪ್ರಾರಂಭಗೊಂಡು ಸಾಧಾರಣ ೪೬ ಲಕ್ಷ ರೂಪಾಯಿಗಳ ಯೋಜನೆ ಈತನಕ ಕಾರ್ಯಗತವಾಗಿಲ್ಲ. ಕೇವಲ ೪೬ ಲಕ್ಷ ರೂಪಾಯಿಗಳಷ್ಟು ಅಂದಾಜು ಹಣವನ್ನು ಕೇವಲ ಪೈಪುಗಳನ್ನು ಮಣ್ಣಿನಲ್ಲಿ ಹೂತಿಡುವ ಕೆಲಸಕ್ಕೆ ವರ್ಷಗಳಿಂದಾಗಿದೆಯೇ ಹೊರತು ಪಂಪು ಆಳವಡಿಸುವ ಇನ್ನಿತರ ಯಾವುದೇ ಕ್ರಮವನ್ನು ಕೈಗೊಳ್ಳದೆ. ....

ಅಧ್ಯಕ್ಷರು.—ಒಂದು ನಿಮಿಷ, ಮಾನ್ಯ ಸದಸ್ಯರು ಅವರವರೆ ನಿಂತುಕೊಂಡು ಮಾತನಾಡಬೇಡಿ. ದಯವಿಟ್ಟು ಪಕ್ಕದಲ್ಲಿ ಸ್ಥಳ ಖಾಲಿ ಇದ್ದರೆ ಅಲ್ಲಿ ಕುಳಿತುಕೊಂಡು ವ್ಯವಹಾರ ನಡೆಸಬಹುದು.

ಶ್ರೀ ಕೆ. ಕುಶಾಲ.—ಇದರಲ್ಲಿ ಕೇವಲ ಪೈಪುಗಳನ್ನು ಮಣ್ಣಿನಲ್ಲಿ ಹಾಕುವುದಕ್ಕೆ ಕಂಟ್ರಾಕ್ಟ್ ಕೊಟ್ಟು ೫ ವರ್ಷವಾಯಿತು. ಇನ್ನಿತರ ಯಾವುದೇ ಕೆಲಸವನ್ನು ಕೈಗೊಳ್ಳಲಿಲ್ಲ. ಈಗಾಗಲೇ ಅಲ್ಲಿ ನೀರಿನ ಸಮಸ್ಯೆ ಬಿಗಡಾಯಿಸಿದೆ. ಆದುದರಿಂದ ಇದರ ಬಗ್ಗೆ ಏನಾದರೂ ವ್ಯವಸ್ಥಿತವಾದ ಕ್ರಮ ಕೈಗೊಳ್ಳುತ್ತೀರೆ ಎಂದು ಕೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರ ಅರ್ಥಮಾಡಿಕೊಂಡಿದೆ. ಬಹುಶಃ ಆದಷ್ಟು ಬೇಗ ಟೆಂಡರುಗಳನ್ನು ಕರೆದು, ಈ ೪೮ ಲಕ್ಷ ಚಿಲ್ಲರೆಯ ಯೋಜನೆಯನ್ನು ಸರ್ಕಾರ ಜಾರಿಗೆ ತರಬೇಕು ಎಂದು ಮಾಡಿದೆ. ಆದಷ್ಟು ಬೇಗನೆ ಈ ಕಾರ್ಯವನ್ನು ಕೈಗೆತ್ತಿಗೊಂಡು ಅಲ್ಲಿನ ಸಮಸ್ಯೆಯನ್ನು ಆದಷ್ಟು ಬೇಗ ಇತ್ಯರ್ಥಗೊಳಿಸುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಕೆ. ಕುಶಾಲ.—ಪಂಪು ಅಳವಡಿಸುವ ಮತ್ತು ಇತರೆ ಪೆಡ್ಡುಗಳನ್ನು ಕಟ್ಟುವಂಥ ಕಾರ್ಯಕ್ರಮಕ್ಕೆ ಅಲ್ಲಿ ಹಣ ಇಲ್ಲ. ಪೆಡ್ಡು ಕಟ್ಟುವುದಕ್ಕೆ ಪುನಃ ಮಂಜೂರಾತಿಗಾಗಿ ಈಗಾಗಲೇ ತಾಲ್ಲೂಕು ಪಂಚಾಯಿತಿ ಸಮಿತಿ ಮೂಲಕ ಕೇಳಿಕೊಳ್ಳುತ್ತಾ ಇದ್ದಾರೆ. ಆದರೆ ಈ ಕಾಮಗಾರಿ ೧೯೮೫ರಲ್ಲಿ ಮಂಜೂರಾಗಿದ್ದಾಗ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದರೂ ಕೂಡ ಈ ಕಾಮಗಾರಿಯನ್ನು ಜಿಲ್ಲಾಪರಿಷತ್ತಿಗೆ, ನಗರ ನೀರು ಸರಬರಾಜು ಇಲಾಖೆಗೆ ವಹಿಸಿಕೊಡದೆ ಇದನ್ನು ಕೇವಲ ಮಂಡಲದ ಮುಖಾಂತರ ಮಾಡಿದೆ. ಇವತ್ತು ತಾಲ್ಲೂಕು ಪಂಚಾಯಿತಿ ಸಮಿತಿ ಮೂಲಕ ಇದಕ್ಕೆ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಬೇಕೆಂಬ ಪ್ರಸ್ತಾಪವನ್ನು ತಾಲ್ಲೂಕು ಪಂಚಾಯಿತಿ ಸಮಿತಿ ಮೂಲಕ ಸ್ಥಳೀಯ ಮಂಡಲ ಪಂಚಾಯಿತಿ ಇಟ್ಟುಕೊಂಡಿದೆ. ಈಗಾಗಲೇ ಅಲ್ಲಿ ನೀರಿನ ಸಮಸ್ಯೆ ತುಂಬ ಇದೆ. ಇನ್ನು ಮುಂದೆ ಟೆಂಡರು ಕರೆದು ಎರಡು ತಿಂಗಳ ಒಳಗಾಗಿ ಈ ಕೆಲಸವನ್ನು ಖಂಡಿತ ಪೂರೈಸುವುದಕ್ಕೆ ಸಾಧ್ಯವಿಲ್ಲ. ನಾನು ಇಷ್ಟೇ ಕೇಳುತ್ತಾ ಇದ್ದೇನೆ. ಸೈಸಿಟಿ ಯೋಜನೆಯಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನಾದರೂ ಕೊಡುವಂಥ ಕಾರ್ಯಕ್ರಮ ಮಾಡದೇ ಇದ್ದರೆ ತುಂಬ ತೊಂದರೆಯಾಗುತ್ತದೆ, ನೀರಿನ ಸಮಸ್ಯೆಯಿಂದ ಅಲ್ಲಿನ ಜನರು ತುಂಬ ಕಂಗಾಲಾಗಿದ್ದಾರೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಮುಗಿದ ತಕ್ಷಣ ಸ್ಥಳೀಯ ಶಾಸಕರೊಡನೆ ಸಮಾಲೋಚನೆಮಾಡಿ, ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ ಆದನ್ನು ಅರ್ಥಮಾಡಿಕೊಂಡು ಆದಷ್ಟು ಬೇಗನೆ ಈ ಯೋಜನೆಯನ್ನು ಕೈಗೆತ್ತಿಕೊಂಡು ಅಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ನಿಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಕೊಡುತ್ತೇನೆ.